ಎಂದಿದ್ದಳು. ನನ್ನ ಕುತೂಹಲ ಗರಿಗೆದರಿತ್ತು.

ಒಂದೆರಡು ದಿನಗಳನ್ನು ಬಿಟ್ಟು ನಾನು ಸಂಜೀವನ ಮನೆಗೆ ಹೋದಾಗ ರಿಚಿ ಅಲ್ಲಿಗೆ ಬಂದಿದ್ದ. ತನ್ನ ಕುರ್ಚಿಯನ್ನೇ ಅವನಿಗೆ ಕೂಡಲು ಕೊಟ್ಟಿದ್ದ ಸಂಜೀವ, ತಾನು ಟೇಬಲಿನ ಮೇಲೆ ಕುಳಿತಿದ್ದ. ರಾಮ್ ಕೂಡಾ ಅಲ್ಲಿದ್ದ, ಮತ್ತೊಬ್ಬನೂ ಇದ್ದ. ಆತನ ಹೆಸರು ನನಗೆ ಮರೆತು ಹೋಗಿದೆ. ಆದರೆ ನಾನು ಅವರನ್ನೆಲ್ಲಾ ಅಷ್ಟಾಗಿ ನೋಡಲೇ ಇಲ್ಲ. ರಿಚಿ ಮಾತ್ರ 'ಸಕಲಕಲಾವಲ್ಲಭನ್' ಸಿನಿಮಾದ ಪೋಸ್ಟರಿನಲ್ಲಿನ ಕಮಲ ಹಾಸನ್ ತರಹ ಕಾಣಿಸುತ್ತಿದ್ದ. ದೃಷ್ಟಿ ಕೀಳದೆ ಬಾಯಿ ತೆರೆದು ಅವನನ್ನು ನೋಡುತ್ತಿದ್ದೆ. ಕಮಲ್ ನನ್ನ ಆರಾಧ್ಯ ದೈವವಾಗಿದ್ದ!

ನನ್ನ ಎವೆಯಿಕ್ಕದ ನೋಟದಿಂದ ರಿಚಿ ಅಚ್ಚರಿಗೊಂಡ. "ಯಾರು ಈ ಮರಿ. ಇಲ್ಲಿ ಏನು ಮಾಡ್ತಾ ಇದಾನೆ? ನೊಣ ಒಳಗೆ ಹೋಗೋದಕ್ಕೂ ಮೊದಲು ಬಾಯಿ ಮುಚ್ಚಲಿಕ್ಕೆ ಹೇಳು" ಎಂದು ಹೇಳಿದ್ದ.

ಹುಡುಗರೆಲ್ಲಾ ನಕ್ಕರು. ನಾನು ನಾಚಿ ಕೆಂಪಾದೆ. "ನಾನು ನಿನ್ನೇ ನೋಡ್ತಾ ಇದ್ದೆ. ನೀನೊಳ್ಳೆ ಸಿನಿಮಾ ಸ್ಟಾರ್ ತರಹ ಇದೀಯಾ" ಎಂದು ನನ್ನನ್ನು ಸಮರ್ಥಿಸಿಕೊಂಡೆ. ನನ್ನ ಹೊಗಳಿಕೆಯಿಂದ ಖುಷಿಯಾದ ರಿಚಿ ನಸುನಕ್ಕ. ಸಂಜೀವ ನನ್ನನ್ನು ಪರಿಚಯಿಸಿದ. ಮಾತು ಪರಿಣಾಮಕಾರಿಯಾಗಿರಲಿ ಎಂದು ರಂಜಿತ್‌ನ ಕೈಮುರಿದ ಘಟನೆಯನ್ನೂ ಸೇರಿಸಿದ.

ರಿಚಿ ಅದನ್ನು ಕೇಳಿ ಎಷ್ಟು ನಕ್ಕನೆಂದರೆ ಅವನ ಕಣ್ಣಲ್ಲಿ ನೀರು ಜಿನುಗಿತ್ತು. ನನ್ನ ಕಡೆಗೆ ನೋಡಿ, "ಲೇ ಮರಿ, ನಿನ್ನ ವಯಸ್ಸೆಷ್ಟೋ?" ಎಂದು ಕೇಳಿದ. "ನಂಗೆ ಆಗ್ಲೇ ಹನ್ನೆರಡು. ನಾನೇನೂ ಚಿಕ್ಕಮರಿ ಅಲ್ಲ" ಎಂದು ಪ್ರತಿಭಟಿಸಿದೆ.

ರಿಚಿ ನಕ್ಕ. "ಹೆ ಹೆ! ಈ ಮರಿ ದೊಡ್ಡದು ಅಂತ ಹೇಳ್ತಾ ಅದೆ. ನಿಂದೇನು ದೊಡ್ಡದು ಅಂತ ನಂಗೆ ಆಶ್ಚರ್ಯ" ಎಂದು ಇನ್ನಷ್ಟು ನಕ್ಕ. ಉಳಿದವರೂ ಮಳ್ಳರಂತೆ ನಗೆಯಲ್ಲಿ ಅವನನ್ನು ಕೂಡಿಕೊಂಡರು. ಅವರು ಯಾಕೆ ನಗುತ್ತಿದ್ದಾರೆಂದು ನನಗೆ ತಿಳಿಯದಿದ್ದರೂ, ನಾನೂ ಅವರನ್ನು ಸೇರಿಕೊಂಡೆ. "ಓಯ್ ಮರಿ, ಬಾ ಇಲ್ಲಿ" ಎಂದ ರಿಚಿ, ನನ್ನ ಕೂದಲಿನಲ್ಲಿ ಕೈಯಾಡಿಸಿದ.

ಅವನ ಹತ್ತಿರ ಹೋದಾಗ ಅಮಲೇರಿದಂತಾಯ್ತು. ಅವನಿಂದ ಸೊಗಸಾದ ಪರಿಮಳ ಬರುತ್ತಿತ್ತು. ಮೈದುಂಬಿ ಬೆಳೆದ ಹಿಪ್ಪನೇರಳೆ ಮರಗಳ ಮೆಳೆಯಲ್ಲಿ ನಡೆದಾಡಿದಂತಾಯ್ತು. ಜಾಗ್ರತೆಯಿಂದ ಅವನ ತೋಳನ್ನು ಹಿಡಿದುಕೊಂಡು, ಮುಖವನ್ನು ಮೇಲೆತ್ತಿ, ಅವನೆಡೆಗೆ ನಕ್ಕೆ.

"ಹಾಗಿದ್ರೆ ನಿಮ್ಮ ಜೊತೆ ನಾನೂ ಸೇರಿಕೋಬಹುದಾ?"

"ನೀವೆಲ್ಲಾ ಏನು ಹೇಳ್ತೀರಾ?" ಉಳಿದವರನ್ನು ಅವನು ಕೇಳಿದ. ಅವರು ಭುಜಕುಣಿಸಿ ಒಪ್ಪಿಗೆ ಕೊಟ್ಟರು. ಅವರಿಗದು ಅಷ್ಟೇನೂ ಮುಖ್ಯ ಸಂಗತಿಯಾಗಿರಲಿಲ್ಲ. ಆ ಕಾರಣದಿಂದಾಗಿ ಇಡೀ ಬೇಸಿಗೆಯ ರಜೆಯಲ್ಲಿ ನಾನು ಅವರೊಡನೆ ಅಡ್ಡಾಡಿದೆ.

ಮೊದಲಿಗೆ ಸಂಜೀವನ ಮನೆಯಲ್ಲಿ ಸೇರುತ್ತಿದ್ದೆವಾದರೂ, ಬಹುಬೇಗನೆ ರಿಚಿಯ ಮನೆ ನಮ್ಮ ಅಡ್ಡೆಯಾಗಿ ಹೋಯ್ತು. ರಿಚಿಯ ಮನೆ ಬಹಳ ದೊಡ್ಡದಿತ್ತಲ್ಲದೆ, ಅವನಿಗೆಂದೇ ಪ್ರತ್ಯೇಕ ಕೋಣೆಯಿತ್ತು. ಜೊತೆಗೆ ನಾವು ಅಲ್ಲಿರುವಾಗಲೆಲ್ಲಾ ಮನೆಯ ಜವಾನನೊಬ್ಬ ತಂಪು ಪಾನೀಯ, ಬಿಸ್ಕತ್ತು, ಸಿಹಿತಿನಿಸು ಇತ್ಯಾದಿಗಳನ್ನು ತಂದು ಕೊಡುತ್ತಿದ್ದ.

ಅವನ ಅಪ್ಪಅಮ್ಮ ಯಾವಾಗಲೂ ಪ್ರಯಾಣದಲ್ಲಿರುತ್ತಿದ್ದರು. ಅವರನ್ನು ಒಮ್ಮೆ ಮಾತ್ರ ನಾನು ಭೇಟಿಯಾಗಿದ್ದೆ. ಅವನ ಅಪ್ಪನದು ರಿಚಿಯ ತದ್ರೂಪ. ಸ್ವಲ್ಪ ನೆರೆತ ಕೂದಲಿನ, ರಿಚಿಯ